ಬೆಳಗಾಂ ಜಿಲ್ಲೆಯಲ್ಲಿ 1992-93 ಹಾಗೂ 1993-94ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವುದರ ಬಗ್ಗೆ

131-ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆಯಲ್ಲಿ ಕೈಗಾರಿಕೆಗಳು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಮಾತ್ರ ಬರುತ್ತಿದ್ದು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಪ್ರೋತ್ಸಾಹವಿಲ್ಲದೇ ಇರುವುದರಿಂದ ಅವುಗಳನ್ನು ಸ್ಥಾಪನೆ ಆಗಲು ಕುಂಠಿತವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಸರ್ಕಾರದವರು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಉದ್ಯಮಿಗಳು ಕೈಗಾರಿಕೆಗಳನ್ನು ಪ್ರಾರಂಭಿಸಲು ಮುಂದೆ ಬರಲು ಯಾವ ಕ್ರಮವನ್ನು ಕೈಗೊಂಡಿರುವರು?*

ಇ) *1992-93, 1993-94ನೇ ಸಾಲಿನಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಕೈಗಾರಿಕೆಗಳು ಪ್ರಾರಂಭವಾಗಿರುತ್ತವೆ. (ತಾಲ್ಲೂಕುವಾರು ಪೂರ್ಣ ವಿವರ ಕೊಡವುದಾಗಬೇಕು)*

ಈ) *ಬೆಳಗಾಂ ಜಿಲ್ಲೆ ಬೈಲಹೊಂಗಲ ಹಾಗೂ ಸೌದತ್ತಿ ತಾಲ್ಲೂಕಿನಲ್ಲಿ ಈ ಮೇಲೆ ಕೇಳಿದ ವರ್ಷಗಳಲ್ಲಿ ಯಾವ್ಯಾವ ಚಿಕ್ಕ ಉದ್ಯಮಿಗಳು ಬಂದಿರುವುವು?*

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).

ಅ) ಬಂದಿದೆ.

ಆ) ನೂತನ ಕೈಗಾರಿಕಾ ನೀತಿ 1993 ರನ್ವಯ ನೂತನ ಕೈಗಾರಿಕೆಗಳಿಗೆ ನೀಡಲಾಗುವ ಉತ್ತೇಜನ ಮತ್ತು ರಿಯಾಯಿತಿಗಳನ್ನು ಬೆಳಗಾಂ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ಮತ್ತು ಗ್ರಾಮಾಂತರ ಪ್ರದೇಶಗಳಿಗೂ ಅನ್ವಯಿಸಲಾಗುತ್ತಿದೆ.

ಇ) ಜಿಲ್ಲೆಯ ಬೆಳಗಾಂ ಪಟ್ಟಣ ಹೊರತುಪಡಿಸಿ ಖಾನಾಪುರ, ಗೋಕಾಕ್ ಮತ್ತು ಬೈಲಹೊಂಗಲಗಳಲ್ಲಿಯೂ ಸಹ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲಾಗಿದೆ.

ಈ) ಗ್ರಾಮಾಂತರ ಯುವಕ, ಯುವತಿಯರಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲವಾಗಲು ತರಬೇತಿಯನ್ನು ನೀಡಲಾಗುತ್ತಿದೆ.

ಈ) ಗ್ರಾಮೀಣ ಪ್ರದೇಶದಲ್ಲಿ ಉದ್ಯಮಶೀಲತೆ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವಿಚಾರ ಸಂಕೀರ್ಣ ಕಾರ್ಯಾಗಾರ ಮತ್ತು ಉದ್ಯಮಶೀಲತಾ ಅಭಿವೃದ್ಧಿ ಶಿಬಿರಗಳನ್ನು ಸಹ ವ್ಯವಸ್ಥೆಗೊಳಿಸಲಾಗುತ್ತದೆ.

ಉ) ವಿಶ್ವ ಯೋಜನೆಯಡಿಯಲ್ಲಿ ಗ್ರಾಮೀಣ ಭಾಗದ ಕೈಗಾರೀಕರಣಕ್ಕಾಗಿ ವಿಶೇಷ ಒತ್ತು ಕೊಡಲಾಗಿದ್ದು ಈ ಯೋಜನೆಯನ್ವಯ ಸ್ಥಾಪಿಸುವ ಕೈಗಾರಿಕಾ ಘಟಕಗಳ ಉದ್ಯಮಿಗಳಿಗೆ ತರಬೇತಿ, ಕಚ್ಚಾಮಾಲು ಪೂರೈಕೆ, ಮಾರುಕಟ್ಟೆ ಸಹಾಯ ಒದಗಿಸಲಾಗುವುದು, ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಸಾಮಾನ್ಯ ಕಾರ್ಯಾಗಾರಗಳನ್ನು ಸಹ ಕಟ್ಟಲಾಗಿದೆ.

ಇ) ಬೆಳಗಾವಿ ಜಿಲ್ಲೆಯಲ್ಲಿ 92-93ನೇ ಸಾಲಿನಲ್ಲಿ ಕ್ರಮವಾಗಿ 902 ಕೈಗಾರಿಕಾ ಘಟಕಗಳು ಮತ್ತು 1993-94ನೇ ಸಾಲಿನಲ್ಲಿ ಜನವರಿ 1994ನೇ ಮಾಹೆ ಅಂತ್ಯದಂತೆ 888 ಕೈಗಾರಿಕೆಗಳು ಪ್ರಾರಂಭವಾಗಿರುತ್ತದೆ. ತಾಲೂಕುವಾರು ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಈ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ 92-93ನೇ ಸಾಲಿನಲ್ಲಿ ಹಾಗೂ 93-94ನೇ ಸಾಲಿನಲ್ಲಿ ಕಾಟನ್ ಜಿನ್ನಿಂಗ್, ಆಯಿಲ್ ಎಕ್ಸೆಲ್ಲರ್, ಕಾಟನ್ ರೋಪ್ಸ್, ವಿದ್ಯುತ್ ಮಗ್ಗಗಳು, ಕಾಂಡಿಮೆಂಟ್ಸ್, ಕೃಷಿ ಉಪಕರಣ ತಯಾರಿಕೆ, ಬೇಕರಿ ವಸ್ತುಗಳ ತಯಾರಿಕೆ, ತಂಪು ಪಾನೀಯ, ಚರ್ಮದ ಪಾದರಕ್ಷೆ ತಯಾರಿಕೆ, ಬೆಳೆ ತಯಾರಿಕೆ ಮುಂತಾದ ಚಿಕ್ಕ ಉದ್ದಿಮೆಗಳು ಸ್ಥಾಪಿತವಾಗಿವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :131 ಕ್ಕೆ ಅನುಬಂಧ

ಕ್ರಮ ಸಂಖ್ಯೆ	ತಾಲ್ಲೂಕು	ಘಟಕ	1992-93 ಬಂಡವಾಳ (ರೂ. ಲಕ್ಷಗಳಲ್ಲಿ)	ಉದ್ಯೋಗ	ಘಟಕ	1993-94 ಬಂಡವಾಳ (ರೂ. ಲಕ್ಷಗಳಲ್ಲಿ)	ಉದ್ಯೋಗ
1.	ಬೆಳಗಾವಿ	178	607.81	1019	177	617.50	968
2.	ಹುಕ್ಕೇರಿ	138	44.68	422	148	45.02	392
3.	ಖಾನಾಪುರ	50	36.95	152	24	6.43	70
4.	ಚಿಕ್ಕೋಡಿ	122	61.24	414	210	150.14	767
5.	ಅಥಣಿ	70	17.61	231	29	27.35	112
6.	ರಾಯಬಾಗ್	66	23.00	198	20	39.51	79
7.	ಬೈಲಹೊಂಗಲ	88	66.08	293	70	41.25	291
8.	ಗೋಕಾಕ್	72	104.16	254	77	70.30	247
9.	ಸವದತ್ತಿ	49	30.55	176	68	67.36	316
10.	ರಾಮದುರ್ಗ	69	12.64	272	65	46.36	434
	ಒಟ್ಟು	902	1094.75	3431	888	1111.62	3679